**CCE PF**
**REVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 23. 03. 2018 ] **ಸಂಕೇತ ಸಂಖ್ಯೆ : 01-K**

Date : 23. 03. 2018 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ / Private Fresh)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** | |
| | **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ? | |
| | ***ಉತ್ತರ :*** | |
| | ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಔಷಧ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು. | |
| 2. | ಮುದುಕಿಯ ಬಳಿ ರಾಹಿಲನು ನುಡಿದ ಗಂಭೀರವಾದ ಮಾತು ಯಾವುದು ? | |
| | ***ಉತ್ತರ :*** | |
| | ಮುದುಕಿಯ ಬಳಿ ರಾಹಿಲನು 'ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು' ಎಂದು ಗಂಭೀರವಾಗಿ ನುಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಮತಂಗಾಶ್ರಮಕ್ಕೆ ಹೋಗಲು ರಾಮಲಕ್ಷ್ಮಣರಿಗೆ ಸೂಚಿಸಿದವರು ಯಾರು ? | |
| | ***ಉತ್ತರ :*** | |
| | ಮತಂಗಾಶ್ರಮಕ್ಕೆ ಹೋಗಲು ರಾಮಲಕ್ಷ್ಮಣರಿಗೆ ಸೂಚಿಸಿದವರು ದನು. | |
| 4. | ವಚನಕಾರರಿಗೆ ಯಾವುದು ದೇವರಾಗಿತ್ತು ? | |
| | ***ಉತ್ತರ :*** | |
| | ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. | |
| 5. | ಧರ್ಮಬುದ್ಧಿಯು ಸೂರ್ಯೋದಯವಾದ ಕೂಡಲೆ ಏನು ಮಾಡಿದನು ? | |
| | ***ಉತ್ತರ :*** | |
| | ಧರ್ಮಬುದ್ಧಿಯು ಸೂರ್ಯೋದಯವಾದ ಕೂಡಲೆ ದೇವಗುರು, ದ್ವಿಜರ ಪೂಜೆ ಮಾಡಿದನು. | |
| 6. | ಯಶೋಭದ್ರೆಯು ರತ್ನಗಂಬಳಿಗಳನ್ನು ಯಾರಿಗೆ ಕೊಟ್ಟಳು ? | |
| | ***ಉತ್ತರ :*** | |
| | ಯಶೋಭದ್ರೆಯು ರತ್ನಗಂಬಳಿಗಳನ್ನು ತನ್ನ ಸೊಸೆಯಂದಿರಿಗೆ ಕೊಟ್ಟಳು. | |
| 7. | ಕವಿ ಜಿ.ಎಸ್. ಶಿವರುದ್ರಪ್ಪನವರು ಕಾಡುಮೇಡುಗಳ ಸ್ಥಿತಿ ಹೇಗಿದೆ ಎಂದು ಹೇಳಿದ್ದಾರೆ ? | |
| | ***ಉತ್ತರ :*** | |
| | ಕವಿ ಜಿ.ಎಸ್. ಶಿವರುದ್ರಪ್ಪನವರು ಕಾಡುಮೇಡುಗಳ ಸ್ಥಿತಿ ಬರಡಾಗಿವೆ ಎಂದು ಹೇಳಿದ್ದಾರೆ. | |
| 8. | ಹಕ್ಕಿಯ ಗರಿಯಲ್ಲಿ ಯಾವ ಯಾವ ಬಣ್ಣಗಳಿವೆ ? | |
| | ***ಉತ್ತರ :*** | |
| | ಹಕ್ಕಿಯ ಗರಿಯಲ್ಲಿ ಬಿಳಿ ಮತ್ತು ಹೊಳೆಯುವ ಬಣ್ಣಗಳಿವೆ. | |
| 9. | ಕಾಲಪಕ್ಷಿ ಯಾರನ್ನು ಹರಸಿದೆ ? | |
| | ***ಉತ್ತರ :*** | |
| | ಕಾಲಪಕ್ಷಿ ಹೊಸಗಾಲದ ಹಸುಮಕ್ಕಳನ್ನು ಹರಸಿದೆ. | |
| 10. | ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು ? | |
| | ***ಉತ್ತರ :*** | |
| | ಕುಂಪಣಿ ಸರ್ಕಾರ ನಿಶ್ಶಸ್ತ್ರೀಕರಣ ಆದೇಶ ಹೊರಡಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?<br>***ಉತ್ತರ :***<br>ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ. | |
| 12. | ಕುವೆಂಪುರವರಿಗೆ ಮಕಮಲ್ಲಿನ ಜಮಖಾನೆಯಂತೆ ಯಾವುದು ಕಂಡಿದೆ ?<br>***ಉತ್ತರ :***<br>ಕುವೆಂಪುರವರಿಗೆ ಮಕಮಲ್ಲಿನ ಜಮಖಾನೆಯಂತೆ ಭೂಮಿಯ ಮೇಲಿನ ಹುಲ್ಲುಹಾಸು ಕಂಡಿದೆ. | |
| 13. | ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು ?<br>***ಉತ್ತರ :***<br>ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ದುರ್ಯೋಧನ. | |
| 14. | ಲವನು ಕುದುರೆಯನ್ನು ಯಾವುದರಿಂದ ಕಟ್ಟಿದನು ?<br>***ಉತ್ತರ :***<br>ಲವನು ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟಿದನು. | |
| 15. | ಹಾಲುಗಲ್ಲದ ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?<br>***ಉತ್ತರ :***<br>ಹಾಲುಗಲ್ಲದ ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ. | |
| 16. | ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?<br>***ಉತ್ತರ :***<br>ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?<br>***ಉತ್ತರ :***<br>ಆ ಮಹಿಳೆ ಯಾವ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಗಡಿ ಪ್ರದೇಶದಲ್ಲಿ ವಿಮಾನದಾಳಿಯಿಂದ ರಕ್ಷಿಸಲು 'ಬ್ಲಾಕ್‌ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ? ಎಂಬ ಪ್ರಶ್ನೆಗಳು ರಾಹಿಲನ ಮನದಲ್ಲಿ ಮೂಡಿದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸಗಳಲ್ಲಿ ನಿಯುಕ್ತರಾಗಿರುತ್ತಾರೆ ?<br>***ಉತ್ತರ :***<br>ಲಂಡನ್ನಿನ ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಮಾಣಿ ಕೆಲಸ, ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್, ಕಾರಕೂನ ಕೆಲಸ, ಸಿನಿಮಾಗೃಹದಲ್ಲಿ ಜಾಗ ಹುಡುಕಿಕೊಡುವ ಕೆಲಸ, ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರ ಕೆಲಸಗಳಲ್ಲಿ ಲಂಡನ್ನಿನ ಹೆಣ್ಣು ಮಕ್ಕಳು ನಿಯುಕ್ತರಾಗಿರುತ್ತಾರೆ. | |
| 19. | ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವನ್ನು ತಿಳಿಸಿ.<br>***ಉತ್ತರ :***<br>ಡಾ. ಅಶೋಕ ಪೈ ಅವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯವನ್ನು ಹೀಗೆ ಹೇಳಿದ್ದಾರೆ. ಕೆಲವರು ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾಗ, ಇನ್ನು ಕೆಲವರು ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಪಕ್ಕದ ಕೊಠಡಿಯಲ್ಲಿ ಮಾತನಾಡುತ್ತಿರುತ್ತಾರೆ. ಟೆಲಿವಿಷನ್‌ನಲ್ಲಿ ಬರುವ ಕೊಲೆಯ ದೃಶ್ಯ ನೋಡುತ್ತಿರುವವರ ದುಃಖದ ಭಾವನೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿನಲ್ಲೂ ದುಗುಡ ಉಂಟುಮಾಡುತ್ತದೆ. ನೃತ್ಯದ ದೃಶ್ಯ ಖುಷಿಯ ಭಾವನೆ ಉಂಟುಮಾಡುತ್ತದೆ. ಯಾವ ಜೀವಿಯೂ ತನ್ನಷ್ಟಕ್ಕೆ ತಾನಿರುವುದಿಲ್ಲ. ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಎಲ್ಲಾ ಜೀವಿಗಳಿಗೂ ಆಗುತ್ತದೆ ಎಂದಿದ್ದಾರೆ. | |
| 20. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.<br>***ಉತ್ತರ :***<br>ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ಅದೇ ದಾರಿಯಲ್ಲಿ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರದಾರಿ ಇರುವಾಗ ಎತ್ತುಗಳು ಮುಂದೆ ಹೋಗದ ಕಣಿ ಹಾಕಿದವು. ಹುಲಿಯ ಘರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದ, ರೈತರ ಮಾತು ಕೇಳಿ ಓಡಿಹೋಯಿತು. ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ಗುಂಡು ಹಾರಿಸಿ, ಗಲಭೆ ಮಾಡುತ್ತ, ಪಂಜು ಹೊತ್ತಿಸಿಕೊಂಡು ಬರುತ್ತಿದ್ದಾಗ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರು ಹಾಕಿ ಎಚ್ಚರಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ದುಷ್ಟಬುದ್ಧಿಯು ತನ್ನ ತಂದೆಯನ್ನು ಏಕಾಂತಕ್ಕೆ ಕರೆದು ಹೇಳಿದ ಮಾತುಗಳಾವುವು ?<br>*ಉತ್ತರ :*<br>ದುಷ್ಟಬುದ್ಧಿಯು ಮನೆಗೆ ಬಂದವನೆ ತನ್ನ ತಂದೆಯ ಕೈಹಿಡಿದು ಏಕಾಂತಕ್ಕೆ ಕರೆದುಕೊಂಡು ಹೋಗಿ ನಡೆದ ವೃತ್ತಾಂತವನ್ನೆಲ್ಲ ತಿಳಿಸುತ್ತಾನೆ. "ನಿಮ್ಮ ಒಂದು ವಚನದಿಂದ ನಮ್ಮ ಪರಿವಾರವೆಲ್ಲ ಹಲವು ಕಾಲ ಹಸಿಯದೆ ಸುಖವಾಗಿ ಬಾಳಬಹುದು. ನೀವು ಆ ಮರದ ಪೊಟರಿಯಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನ್ನೆಲ್ಲವನ್ನು ತೆಗೆದುಕೊಂಡು ಹೋಗಿದ್ದಾನೆ ಎಂದು ನುಡಿಯಬೇಕು" ಎಂದು ತನ್ನ ತಂದೆಗೆ ಹೇಳುತ್ತಾನೆ. | |
| 22. | ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನು ನೀಡಿದನು ?<br>*ಉತ್ತರ :*<br>ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ವ್ಯಾಪಾರ ಮುಗಿಸಿ ಬಂದು ಮಧುರಾಪುರದ ಉದ್ಯಾನದಲ್ಲಿ ಬೀಡುಬಿಟ್ಟಿದ್ದರು. ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುಷ್ಟಬುದ್ಧಿಯನ್ನು ಕರೆದು ಸಂಪತ್ತನ್ನೆಲ್ಲ ಹಂಚಿಕೊಳ್ಳೋಣ ಎಂದಾಗ, ನಾವಿಬ್ಬರು ಈ ಸಂಪತ್ತನ್ನೆಲ್ಲ ಹಂಚಿಕೊಂಡು ಮನೆಯಲ್ಲಿಯೇ ಸ್ವತಂತ್ರರಾಗಿ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದ ಸಂಪತ್ತನ್ನೆಲ್ಲ ಅರಳೀಮರದ ಬುಡದಲ್ಲಿ ಹೂತಿಡೋಣ ಎಂದು ಧರ್ಮಬುದ್ಧಿಗೆ ದುಷ್ಟಬುದ್ಧಿ ಸಲಹೆ ನೀಡುತ್ತಾನೆ. | |
| 23. | ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದು ಭಾವಿಸಲು ಕಾರಣವೇನು ?<br>*ಉತ್ತರ :*<br>ಅರಸ ವೃಷಭಾಂಕ ಮತ್ತು ಸುಕುಮಾರಸ್ವಾಮಿಯನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ಬಂಧುಗಳು, ಪರಿವಾರದವರು ಶುಭಕರವಾದ ಬಿಳಿ ಸಾಸಿವೆಯ ಅಕ್ಷತೆಯನ್ನು ಹಾಕಿದಾಗ, ಸುಕುಮಾರ ಸ್ವಾಮಿಗೆ ಒತ್ತಿದಂತಾಗಿ ಸೊಂಟವನ್ನು ಅಲುಗಾಡಿಸುತ್ತಾನೆ. ದೀಪವನ್ನು ನೋಡಿದಾಗ ಕಣ್ಣೀರು ಸುರಿಸುತ್ತಾನೆ. ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗಿ, ಅರ್ಧ ಆಹಾರವನ್ನು ಉಗುಳುವುದನ್ನು ಕಂಡು ಆಹಾರದ ಮೇಲಿನ ಅರುಚಿಯಿಂದ ಹೀಗೆ ಮಾಡುತ್ತಿದ್ದಾನೆ. ಈತನಿಗೆ ಏನೋ ವ್ಯಾದಿಯಿರಬಹುದೆಂದು ಅರಸ ಭಾವಿಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ರತ್ನಗಂಬಳಿಗಳನ್ನು ಕೊಂಡ ಸಂದರ್ಭದಲ್ಲಿ ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು ? | |
| | ***ಉತ್ತರ :*** | |
| | ವ್ಯಾಪಾರಿಯೊಬ್ಬ ರತ್ನದ್ವೀಪದಿಂದ ರತ್ನಗಂಬಳಿಗಳನ್ನು ಮಾರಲು ಬರುತ್ತಾನೆ. ಅದರ ಬೆಲೆ ತಿಳಿದು ಕೊಂಡುಕೊಳ್ಳಲಾಗದೆ ಅರಸ ವೃಷಭಾಂಕ ಕಳಿಸುತ್ತಾನೆ. ಆದರೆ ಇದೇ ರತ್ನಗಂಬಳಿಗಳನ್ನು ಯಶೋಭದ್ರೆ ಲಕ್ಷದೀನಾರ ಹಣ ಕೊಟ್ಟು ಕೊಂಡುಕೊಳ್ಳುತ್ತಾಳೆ. ಆ ಪ್ರತಿಯೊಂದು ರತ್ನಗಂಬಳಿಯನ್ನು ನಾಲ್ಕು ತುಂಡುಗಳಾಗಿಸಿ, ಒಟ್ಟು ಮೂವತ್ತೆರಡು ತುಂಡುಗಳನ್ನಾಗಿ ಮಾಡಿ ತನ್ನ ಮೂವತ್ತೆರೆಡು ಸೊಸೆಯಂದಿರಿಗೆ ಕೊಡುತ್ತಾಳೆ. ಆ ಸೊಸೆಯಂದಿರು ಅದನ್ನು ತಮ್ಮ ಕೆರ್ಪು (ಚಪ್ಪಲಿ)ಗಳಲ್ಲಿ ಸೇರಿಸಿಕೊಂಡಿದ್ದಾರೆ ಎಂಬ ಸುದ್ದಿ ತಿಳಿದು ಅರಸ ವೃಷಭಾಂಕ ಆಶ್ಚರ್ಯಗೊಳ್ಳುತ್ತಾನೆ. | |
| 25. | ಹಲಗಲಿಯ ಬೇಡರು ದಂಗೆ ಏಳಲು ಕಾರಣಗಳೇನು ? | |
| | ***ಉತ್ತರ :*** | |
| | ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಆಡಳಿತದ ಸೂತ್ರ ಹಿಡಿದು ನಿಶ್ಶಸ್ತ್ರೀಕರಣ ಕಾಯಿದೆ ಹೇರಿದರು. ಇದರಂತೆ ಸರಕಾರದ ಅನುಮತಿಯಿಲ್ಲದೆ ಶಸ್ತ್ರಾಸ್ತ್ರ ಹೊಂದುವಂತಿಲ್ಲ. ಇದ್ದ ಆಯುಧಗಳನ್ನು ಹಿಂದಿರುಗಿಸಬೇಕಾಯಿತು. ಹಲಗಲಿಯ ಬೇಡರು ವಿರೋಧಿಸುತ್ತಾರೆ. ಬೇಡರಾಗಿರುವುದರಿಂದ ಆಯುಧವಿಲ್ಲದೆ ಬದುಕುವುದು ಅಸಾಧ್ಯ. ಅಲ್ಲದೆ ಗುಲಾಮಗಿರಿಯನ್ನು ಒಪ್ಪಿಗೊಂಡಂತಾಗುತ್ತದೆ ಎಂದು ಕಾರಕೂನನ ಕಪಾಳಕ್ಕೆ ಹೊಡೆಯುತ್ತಾರೆ. ಸುದ್ದಿ ತಿಳಿದ ಸಾಹೇಬ ಮತ್ತಷ್ಟು ಸೈನ್ಯವನ್ನು ಕಳಿಸುತ್ತಾನೆ. ರಾಮ, ಬಾಲ, ಜಡಗ, ಹನುಮ ಮೊದಲಾದ ವೀರರು ತಮ್ಮಲ್ಲಿದ್ದ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದರು. | |
| 26. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ. | |
| | ***ಉತ್ತರ :*** | |
| | ರಘುವಂಶದ ರಾಜನಾದ ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ಪರಾಕ್ರಮಿಗಳಾದ ರಾಜರು ಕುದುರೆಗೆ ನಮಸ್ಕರಿಸಿ ಕಳಿಸುತ್ತಿದ್ದರು. ಹೀಗೆ ಯಾಗದ ಕುದುರೆ ಭೂಮಿಯಲ್ಲಿ ಸಂಚರಿಸುತ್ತ ವಾಲ್ಮೀಕಿ ಮುನಿಯ ಆಶ್ರಮದ ಕಡೆಗೆ ಬರುತ್ತದೆ. ಮುನಿಯ ಆಶ್ರಮದ ವಿನಿಯೋಗಕ್ಕಾಗಿ ಇದ್ದ ಉದ್ಯಾನವನದಲ್ಲಿ ಬೆಳೆದಿದ್ದ ಹಸಿರು ಹುಲ್ಲನ್ನು ನೋಡಿ, ತಿನ್ನಲು ಬಯಸಿ ಯಜ್ಞಾಶ್ವ ವಾಲ್ಮೀಕಿಯ ಆಶ್ರಮದ ವನವನ್ನು ಪ್ರವೇಶಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಯಜ್ಞಾಶ್ವದ ಹಣೆಯಲ್ಲಿದ್ದ ಒಕ್ಕಣೆಯನ್ನು ಬರೆಯಿರಿ.<br>*ಉತ್ತರ :*<br>ಈ ಭೂಮಿಯಲ್ಲಿ ಕೌಸಲ್ಯೆಯ ಪುತ್ರನಾದ ಶ್ರೀರಾಮನೊಬ್ಬನೇ ವೀರನಾಗಿದ್ದಾನೆ. ಇದು ಆತನ ಅಶ್ವಮೇಧಯಾಗದ ಕುದುರೆ. ಎದುರಿಸುವ ಸಾಮರ್ಥ್ಯವಿರುವವರು ಯಾರಾದರೂ ತಡೆಯಲಿ (ಎದುರಿಸಲಿ) ಎಂದು ಯಜ್ಞಾಶ್ವದ ಹಣೆಯಲ್ಲಿ ಒಕ್ಕಣೆಯನ್ನು ಬರೆಯಲಾಗಿತ್ತು. | |
| 28. | ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?<br>*ಉತ್ತರ :*<br>ಪರಶುರಾಮನು ತನ್ನಲ್ಲಿದ್ದ ಎಲ್ಲಾ ಆಭರಣಗಳನ್ನು ಬೇಡಿದವರಿಗೆ ನೀಡಿದ್ದ, ಭೂಮಿಯನ್ನು ಗುರುವಿಗೆ ನೀಡಿ, ಜಟಾಧಾರಿಯಾಗಿ ತಪಸ್ವಿಗೆ ಹೋಗಲು ಸಿದ್ಧನಾಗಿದ್ದನು. ಇಂತಹ ಸಮಯದಲ್ಲಿ ಸಂಪತ್ತನ್ನು ಬೇಡಲು ಬಂದ ದ್ರೋಣರಿಗೆ ಅರ್ಘ್ಯವನ್ನು ನೀಡಲು ಚಿನ್ನದ ಪಾತ್ರೆ ಇಲ್ಲವಾದ್ದರಿಂದ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡಿದನು. | |
| 29. | ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?<br>*ಉತ್ತರ :*<br>ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ವಿಕಾಸವಾಗುತ್ತಿತ್ತು. ಇಂದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. ಶೂದ್ರವರ್ಗ ತನ್ನ ಊಳಿಗ ಸ್ವಭಾವವನ್ನು ಬಿಟ್ಟು ಹೊರಬರಬೇಕೆಂದು ಕರೆ ನೀಡುತ್ತಾರೆ. ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲ ಬರುತ್ತದೆ ಎಂದು ಭಾವಿಸುತ್ತಾರೆ. | |
| 30. | ಭಗತ್‌ಸಿಂಗ್‌ನ ಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿದು ಬಂದವು ?<br>*ಉತ್ತರ :*<br>ಹನ್ನೆರಡು ವರ್ಷದ ಬಾಲಕ ಶಾಲೆಗೆ ಹೋಗದೆ ಅಮೃತಸರದ ಜಲಿಯನ್ ವಾಲಾಬಾಗ್‌ಗೆ ಹೋಗಿ ಅಂತರ್ಮುಖಿಯಾಗಿ ನಿಂತು, ನಂತರ ಅಲ್ಲಿದ್ದ ಮಣ್ಣನ್ನು ಹಣೆಗಿಟ್ಟುಕೊಂಡು, ಇನ್ನಷ್ಟನ್ನು ಡಬ್ಬಿಯಲ್ಲಿ ಶೇಖರಿಸಿಕೊಂಡು ರಾತ್ರಿ ಮನೆಗೆ ಹಿಂದಿರುಗಿದಾಗ, ಎಂದಿನಂತೆ ಸಹೋದರಿ ಊಟಕ್ಕೆ ಎಬ್ಬಿಸುತ್ತಾಳೆ. ಪ್ರಿಯವಾದ ಮಾವಿನ ಹಣ್ಣನ್ನು ನೀಡಿದರೂ ಒಲ್ಲೆ ಎನ್ನುತ್ತಾನೆ. ಕಾರಣ ಕೇಳಿದಾಗ ಮನೆಯ ಹಿಂಭಾಗಕ್ಕೆ ಕರೆದೊಯ್ದು ರಕ್ತಸಿಕ್ತವಾದ ಮಣ್ಣನ್ನು ತೋರಿಸುತ್ತಾನೆ. ಅದು ಎಲ್ಲಿಯದೆಂದು ತಿಳಿದಾಗ ಭಗತ್‌ಸಿಂಗ್‌ನ ಉಪವಾಸಕ್ಕೆ ಕಾರಣ ತಿಳಿಯುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | ಮೃಗದ ಬಗೆಗೆ ಸುಂದರಿಯ ಮನಸ್ಸು ಏಕೆ ಕರಗುತ್ತಿತ್ತು ?<br>***ಉತ್ತರ :***<br>ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲಿ ನಗು ತರುತ್ತಿದ್ದವು. ಎಂದೂ ತನ್ನ ವಚನ ಮುರಿದಿರಲಿಲ್ಲ, ಮನ ನೋಯಿಸಿರಲಿಲ್ಲ. ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಮುಖ, ಚಲನ–ವಲನ ನೆನಪಾಗುತ್ತಿತ್ತು. ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು. ಆತನ ಕಾಳಜಿಯನ್ನು ನೆನೆದು ಮೃಗದ ಬಗೆಗೆ ಸುಂದರಿಯ ಮನಸ್ಸು ಕರಗುತ್ತಿತ್ತು. | |
| 32. | ‘ಉತ್ತರಾಣಿ ಗಿಡ’ ಎಂಬ ಉತ್ತರ ಬರಲು ಹೇಳಿದ ಒಗಟು ಯಾವುದು ?<br>***ಉತ್ತರ :***<br>“ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು<br>ಹೋಗೋರ ಮುಂಜೆರಗ ಹಿಡಿಯೋದು–ಎಲೆಬಾಲೆ<br>ಬಾರೆ ಇದರರ್ಥ ಒಡೆದ್ಹೇಳೆ” | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | $6 \times 3 = 18$ |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | “ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ”<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ವಿ.ಕೃ. ಗೋಕಾಕ್‌ರು ಬರೆದ ‘ಸಮುದ್ರದಾಚೆಯಿಂದ’ ಎಂಬ ಪ್ರವಾಸಕಥನದಿಂದ ಆಯ್ದ ‘ಲಂಡನ್ ನಗರ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಲಂಡನ್ ನಗರದ ಪ್ರವಾಸದ ಅನುಭವಗಳನ್ನು ಲೇಖಕರು ದಾಖಲಿಸುತ್ತ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬೇಕನ್ ಹೇಳಿದ ಮಾತನ್ನು ಸ್ಮರಿಸುತ್ತಾರೆ. ಕಡಿಮೆ ದಿನಗಳಲ್ಲಿ ಮನಸ್ಸು ವಿಕಾಸಗೊಂಡಿದೆ, ದೃಷ್ಟಿ ವಿಶಾಲವಾಗಿದೆ, ಸಂಸ್ಕೃತಿ ಒರೆಗಲ್ಲಿನ ಮೇಲೆ ನಿಂತಿದೆ ಎಂದು ನೆನಸುತ್ತ ಬೇಕನ್ ಹೇಳಿದ ಮಾತನ್ನು ನೆನಪಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>***ಸ್ವಾರಸ್ಯ :*** ‘ದೇಶ ಸುತ್ತು ಕೋಶ ಓದು’ ಎಂಬ ಗಾದೆಯನ್ನು ಇದು ಅರ್ಥೈಸುತ್ತದೆ. ದೇಶ–ವಿದೇಶಗಳ ಪ್ರವಾಸದ ಅನುಭವವು ಜ್ಞಾನಾಭಿವೃದ್ಧಿಗೆ ಸಹಕಾರಿ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವರವರು ಬರೆದಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಲೇಖನದಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಒಮ್ಮೆ ದಲಿತ ಕವಿ ಸಿದ್ದಲಿಂಗಯ್ಯನವರು ಲೇಖಕ ದೇವನೂರ ಮಹಾದೇವ ಅವರಿಗೆ ಹೇಳಿದ ಮನೆಮಂಚಮ್ಮನ ಕಥೆಯಲ್ಲಿ ಮನೆಮಂಚಮ್ಮದೇವಿಗೆ ಊರಿನ ಗ್ರಾಮಸ್ಥರೆಲ್ಲ ಸೇರಿ ಗುಡಿಯನ್ನು ಕಟ್ಟುತ್ತಿದ್ದಾಗ, ಚಾವಣಿಯ ಹಂತಕ್ಕೆ ಬಂದಾಗ ಒಬ್ಬನ ಮೇಲೆ ಆ ದೇವತೆ ಆವಾಹನೆಗೊಂಡು ಈ ಮಾತನ್ನು ಜನರಿಗೆ ಹೇಳುತ್ತಾಳೆ ಎಂಬುದನ್ನು ಲೇಖಕರು ಹೇಳಿದ್ದಾರೆ.<br>***ಸ್ವಾರಸ್ಯ :*** ಸಾಮಾನ್ಯ ಜನರಿಗೆ ಮನೆ ಇಲ್ಲದಿರುವಾಗ ನನಗೇಕೆ ಎಂಬ ಭಾವನೆ. ಭಕ್ತರ ಬೇಡಿಕೆಯನ್ನು ಈಡೇರಿಸುವ ದೇವಿಯಲ್ಲಿ ಕಾರುಣ್ಯ, ಸಮಾನತೆ, ಹೃದಯ ವೈಶಾಲ್ಯತೆಯನ್ನು ಕಾಣಬಹುದು. | |
| 35. | "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಎ.ಎನ್. ಮೂರ್ತಿರಾವ್ ಅವರು ಬರೆದಿರುವ 'ಸಮಗ್ರ ಲಲಿತ ಪ್ರಬಂಧಗಳು' ಸಂಕಲನದಿಂದ ಆಯ್ದು 'ವ್ಯಾಘ್ರಗೀತೆ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಹುಲಿಯಿಂದ ತಪ್ಪಿಸಿಕೊಳ್ಳಲು ಕುಲಾಲ ಚಕ್ರದಂತೆ ತಿರುಗಿ ತಿರುಗಿ ಶಾನುಭೋಗರಿಗೆ ಆಯಾಸವಾಗಿತ್ತು. ಮಡಿಯಬೇಕಾದರೆ ಮಾಡಿಯೇ ಮಡಿಯಬೇಕೆಂದು ಕೈಯಲ್ಲಿದ್ದ ಬ್ರಹ್ಮಾಸ್ತ್ರವಾದ ಖಿರ್ದಿ ಪುಸ್ತಕವನ್ನು ಹುಲಿಯೆಡೆಗೆ ಎಸೆದು ಅದರ ಗಮನ ಬೇರೆಡೆಗೆ ಸೆಳೆದು ಮರವೇರಿ ಬಿಡಬಹುದೆಂದು ತಿಳಿದು ಖಿರ್ದಿ ಪುಸ್ತಕವನ್ನು ಹುಲಿಯೆಡೆಗೆ ಎಸೆದು ಮೇಲಿನಂತೆ ಹೇಳುತ್ತ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸುವ ಸಂದರ್ಭದಲ್ಲಿ ಶಾನುಭೋಗರು ಮೇಲಿನಂತೆ ದೇವರಲ್ಲಿ ಪ್ರಾರ್ಥಿಸುತ್ತಾರೆ.<br>***ಸ್ವಾರಸ್ಯ :*** 'ಸಂಕಟ ಬಂದಾಗ ವೆಂಕಟರಮಣ' ಎಂಬ ಮಾತಿನಂತೆ, ಅಪಾಯಬಂದಾಗ ಉಪಾಯ ಹುಡುಕುವ ಗುಣವನ್ನು ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ಸಾರ್ವಭೌಮರಾ ನೆತ್ತಿಯ ಕುಕ್ಕಿ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಕವಿ ದ.ರಾ. ಬೇಂದ್ರೆಯವರು ರಚಿಸಿದ 'ಗರಿ' ಕವನ ಸಂಕಲನದಿಂದ ಆಯ್ದ 'ಹಕ್ಕಿಹಾರುತಿದೆ ನೋಡಿದಿರಾ' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.<br>***ಸಂದರ್ಭ :*** ಕಾಲದ ಸುಳಿಯಲ್ಲಿ ಎಲ್ಲರೂ ಸಮಾನರು. ನಿಸರ್ಗದತವಾದ ಕಾಲಚಕ್ರದಲ್ಲಿ ಎಂತಹ ಪ್ರಭಾವಶಾಲಿಯಾದರೂ ತಲೆಬಾಗಲೇಬೇಕು. ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತ ಹೋಗುತ್ತದೆ. ಬ್ರಿಟಿಷರ ಸಾಮ್ರಾಜ್ಯಶಾಹಿ ಆಡಳಿತ ಅನೇಕ ಕೋಟೆ ಕೊತ್ತಲಗಳನ್ನು ತೇಲಿಸಿ. ಮುಳುಗಿಸುವಂತೆ ಮಾಡಿತು. ಎಂತಹ ಸಾರ್ವಭೌಮರನ್ನು ಸಹ ಕಾಲ ಬಿಡಲಿಲ್ಲ ಎಂಬುದನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿ ಹೇಳಿದ್ದಾರೆ.<br>***ಸ್ವಾರಸ್ಯ :*** ಚಲನಶೀಲವಾದ ಕಾಲಕ್ಕೆ ಎಲ್ಲರೂ ತಲೆಬಾಗಲೇಬೇಕು. ಕಾಲದ ಸುಳಿಯಲ್ಲಿ ಸಿಲುಕದೆ ಇರುವ ವ್ಯಕ್ತಿ ಯಾರೊಬ್ಬರೂ ಇಲ್ಲ ಎಂಬುದನ್ನು ಧ್ವನಿಸುತ್ತದೆ. | |
| 37. | "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿ ಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಹೇರಿದರು. ಆಯುಧಗಳನ್ನು ಒಪ್ಪಿಸಿದರೆ ಗುಲಾಮಗಿರಿ ಒಪ್ಪಿದಂತೆ, ಇದ್ದೂ ಸತ್ತಂತೆ ಎಂದು ಭಾವಿಸಿ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಏಳುತ್ತಾರೆ. ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲುತ್ತಾರೆ. ಆಗ 'ಕಾರ' ಸಾಹೇಬ ಹಲಗಲಿಗೆ ಮುತ್ತಿಗೆ ಹಾಕಿ ನಿರ್ದಯೆಯಿಂದ ಎಲ್ಲರನ್ನೂ ಗುಂಡುಹಾರಿಸಿ ಕೊಂದು, ಹಲಗಲಿಯನ್ನು ಲೂಟಿ ಮಾಡಿ ಬೆಂಕಿ ಇಟ್ಟು ಹಲಗಲಿಯ ಗುರುತು ಎಳ್ಳಷ್ಟು ಉಳಿಯದಂತೆ ಮಾಡುತ್ತಾರೆ ಎಂಬುದನ್ನು ಲಾವಣಿಕಾರ ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾನೆ.<br>***ಸ್ವಾರಸ್ಯ :*** ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ನಿರಂಕುಶ ಆಡಳಿತ ಹಾಗೂ ಅನಕ್ಷರಸ್ಥರಾಗಿದ್ದರೂ ಬೇಡರಲ್ಲಿದ್ದ ದೇಶಭಕ್ತಿ, ಸ್ವಾತಂತ್ರ್ಯ ಹೋರಾಟದ ಕೆಚ್ಚನ್ನು ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ಬೇರೆ ಬಣ್ಣವನೆ ಕಾಣೆ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಕುವೆಂಪು ಅವರು ರಚಿಸಿರುವ 'ಪಕ್ಷಿಕಾಶಿ' ಕವನ ಸಂಕಲನದಿಂದ ಆಯ್ದ 'ಹಸುರು' ಎಂಬ ಕವನದಿಂದ ಆಯ್ದುಕೊಳ್ಳಲಾಗಿದೆ.<br>***ಸಂದರ್ಭ :*** ಆಶ್ವಯುಜ ಮಾಸದ ನವರಾತ್ರಿಯ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಾದ ಪ್ರಕೃತಿ ಸೌಂದರ್ಯವನ್ನು ನೋಡಿ, ಎಲ್ಲಿ ನೋಡಿದರಲ್ಲಿ ಹಸುರು ತುಂಬಿದೆ. ಇಡೀ ಭೂಮಿಗೆ ಹಚ್ಚಹಸುರು ಬಣ್ಣದ ಮಕಮಲ್ಲಿನ ಜಮಖಾನೆಯನ್ನು ಹಾಸಿ ಮುಚ್ಚಿದಂತೆ ತೋರುತ್ತಿದೆ. ಹಸಿರು ಬಣ್ಣವೊಂದನ್ನು ಬಿಟ್ಟು ಬೇರೆ ಯಾವ ಬಣ್ಣವೂ ಕಾಣುತ್ತಿಲ್ಲ ಎಂಬುದನ್ನು ಕವಿ ಕುವೆಂಪು ಅವರು ಮೇಲಿನಂತೆ ಹೇಳಿದ್ದಾರೆ.<br>***ಸ್ವಾರಸ್ಯ :*** ಮಲೆನಾಡಿನ ಪ್ರಕೃತಿ ಸೌಂದರ್ಯ ಹಾಗೂ ಪ್ರಕೃತಿಯ ಹಸುರಿನಲ್ಲಿ ಕವಿ ಮನ ತಲ್ಲೀನರಾಗಿರುವುದು ಸ್ವಾರಸ್ಯಕರವಾಗಿ ಮೂಡಿ ಬಂದಿದೆ. | |
| | **ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ/ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಪು.ತಿ. ನರಸಿಂಹಾಚಾರ್ಯ :<br>***ಉತ್ತರ :***<br>ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್‌ರವರು ೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಕನ್ನಡ ವಿಶ್ವಕೋಶದ ಭಾಷಾಂತರಕಾರರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು ಸಂಪಾದಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಗೀತನಾಟಕ, ಕವಿತೆ, ಸಣ್ಣಕತೆ, ಪ್ರಬಂಧ, ವಿಚಾರಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಇವರು ಅಹಲ್ಯೆ, ಗೋಕುಲನಿರ್ಗಮನ, ಶಬರಿ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀ ಹರಿಚರಿತೆ, ರಥಸಪ್ತಮಿ ಎಂಬ ಕೃತಿಗಳನ್ನು ರಚಿಸಿದ್ದಾರೆ.<br>ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಶ್ರೀ ಹರಿಚರಿತೆ' ಕಾವ್ಯಕ್ಕೆ 'ಪಂಪ ಪ್ರಶಸ್ತಿ' ಲಭಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ನೀಡಿ ಗೌರವಿಸಿದೆ. ಚಿಕ್ಕಮಗಳೂರಿನಲ್ಲಿ ೧೯೮೧ ರಲ್ಲಿ ನಡೆದ ೫೩ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಪಂಪ :<br>***ಉತ್ತರ :***<br>ಆದಿ ಕವಿ ಎಂದೇ ಹೆಸರಾದ ಪಂಪ ಕ್ರಿ.ಶ. ೯೪೧ ರಲ್ಲಿ ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಿನ ಸ್ಥಳವಾದ ವೆಂಗಿಪಳು ನಿಸರ್ಗ ಸೌಂದರ್ಯದ ತಾಣ. ಚಾಲುಕ್ಯರ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಈತ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯಂ' ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. 'ವಿಕ್ರಮಾರ್ಜನ ವಿಜಯ'ಕ್ಕೆ 'ಪಂಪಭಾರತ' ಎಂಬ ಮತ್ತೊಂದು ಹೆಸರಿದೆ. ವೇದವ್ಯಾಸರ ಮಹಾಭಾರತವನ್ನು ಆಧರಿಸಿ ಬರೆದ ಈ ಕೃತಿಯಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಇದೊಂದು ಲೌಕಿಕ ಕಾವ್ಯವೆಂದು ಘೋಷಿಸಿದ್ದಾನೆ. ಕವಿಯೂ, ಕಲಿಯೂ ಆಗಿದ್ದ ಪಂಪ ರತ್ನತ್ರಯರಲ್ಲಿ ಒಬ್ಬ. ಸರಸ್ವತೀಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ ಎಂಬ ಬಿರುದುಗಳನ್ನು ಪಡೆದಿದ್ದ ಪ್ರಸಿದ್ಧ ಕವಿ ಎಂದರೆ ಪಂಪ. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ನೆಲಕಿಱಿವೆನೆಂದು ..........................................................<br>...................................................................<br>...................................................................<br>........................................................ ಪುದುವಾಟಿಪೆನೇ॥<br>***ಅಥವಾ***<br>ಪುಟ್ಟಿದ ...................................................................<br>...................................................................<br>...................................................................<br>............................................................... ಮೆಱೆವೆಂ॥<br>***ಉತ್ತರ :***<br>ನೆಲಕಿಱಿವೆನೆಂದು ಬಗೆದಿರೆ ।<br>ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ ॥<br>ೞ್ಲನೆನಗೆ ದಿನಪಸುತನಂ ।<br>ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟಿಪೆನೇ ॥<br>**ಅಥವಾ** | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪುಟ್ಟಿದ ನೂರ್ವರುಮೆನ್ನೊಡ ।<br>ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ ॥<br>ಪುಟ್ಟಿ ಪೊದಱುದು ಸತ್ತರ್<br>ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ ॥ | |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ<br>ಹೊಸ ಭರವಸೆಗಳ ಕಟ್ಟೋಣ.<br>ಮನುಜರ ನಡುವಣ ಅಡ್ಡಗೋಡೆಗಳ<br>ಕೆಡವುತ ಸೇತುವೆಯಾಗೋಣ. | |
| | ***ಉತ್ತರ :*** | |
| | ಕವಿ ಜಿ.ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಎಂಬ ಕವನದಲ್ಲಿ ದೃಢಸಂಕಲ್ಪದಿಂದ ಹೇಗೆ ಯಶಸ್ಸುಗಳಿಸಬಹುದು ಎಂಬುದನ್ನು ಹೇಳಿದ್ದಾರೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದರೂ ದೃಢಸಂಕಲ್ಪ, ಆತ್ಮವಿಶ್ವಾಸದಿಂದ ಕ್ರಿಯಾಶೀಲರಾದಾಗ ಯಶಸ್ಸು ಸಿಗುತ್ತದೆ. ಜೀವನದಲ್ಲಿ ಬೇರೆ ಬೇರೆ ಜಾತಿ, ಮತಗಳಲ್ಲಿ ಮುಳುಗಿ ಹೋಗಿದ್ದಾನೆ. ಅವರಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆಯ ಭರವಸೆಯನ್ನು ಬಿತ್ತಬೇಕು. ಮನುಷ್ಯ–ಮನುಷ್ಯರ ನಡುವೆ ಕಂದಕವನ್ನು ಸೃಷ್ಟಿಸಿರುವ ಜಾತಿ ಎಂಬ ಗೋಡೆಯನ್ನು ಕೆಡವಿ ಎಲ್ಲರನ್ನೂ ಒಗ್ಗೂಡಿಸುವ ಸೇತುವೆಯನ್ನು ನಿರ್ಮಿಸಬೇಕು. ಭೇದಭಾವವನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲವೃದ್ಧಿಸುತ್ತದೆ. 'ವಸುದೈವ ಕುಟುಂಬಕಂ' ಎಂಬಂತೆ ಇಡೀ ವಿಶ್ವವೇ ಕುಟುಂಬವಾಗಬೇಕು. ಆಗ ಅಸಾಧ್ಯವಾದುದು ಯಾವುದೂ ಇಲ್ಲ ಎಂಬಂತೆ ಯಶಸ್ಸನ್ನು ಸಾಧಿಸಬಹುದು. ಪಂಪ ಮಹಾಕವಿ ಹೇಳಿದಂತೆ 'ಮಾನವಕುಲ ತಾನೊಂದೆ ವಲಂ' ಮನುಷ್ಯಕುಲವೊಂದೇ ಶ್ರೇಷ್ಠವಾದುದು. ಆದ್ದರಿಂದ ನಮ್ಮಲ್ಲಿರುವ ಭೇದ–ಭಾವ ಎಂಬ ಸಂಕುಚಿತ ಮನೋಭಾವವನ್ನು ದೂರಮಾಡಿ ಎಲ್ಲರೂ ಐಕ್ಯತೆಯಿಂದ ಬಾಳಬೇಕೆಂಬುವ ದೃಢಸಂಕಲ್ಪವನ್ನು ಕೈಗೊಳ್ಳಬೇಕೆಂಬುದೇ ಪ್ರಸ್ತುತ ಪದ್ಯಭಾಗದ ಮೌಲ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ಮೈಸೂರು ಸಂಸ್ಥಾನ 'ಮಾದರಿ ಮೈಸೂರು ರಾಜ್ಯ' ಎಂಬ ಕೀರ್ತಿಗೆ ಪಾತ್ರವಾಗುವಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಪಾತ್ರವೇನು ? ವಿವರಿಸಿ.

**ಅಥವಾ**

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

***ಉತ್ತರ :***

ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ ಆಗಸ್ಟ್ ೮ ರಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡು, ದಿವಾನರಾಗಿದ್ದ ಸರ್ ಕೆ. ಶೇಷಾದ್ರಿಯವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಅರಸುಮನೆತನದಿಂದ ಬಂದವರಾದರೂ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವುದರ ಪರವಾಗಿದ್ದರು. 'ಪ್ರಜಾಪ್ರತಿನಿಧಿ ಸಭೆ' ಹೊಸರೂಪ ಪಡೆಯಿತು. ೧೯೨೩ ರಲ್ಲಿ ಕಾನೂನೊಂದನ್ನು ಜಾರಿಗೆ ತಂದು 'ಪ್ರಜಾಪ್ರತಿನಿಧಿ ಸಭೆ'ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪ ನಡೆಸಿ, ವಾರ್ಷಿಕ ಆಯವ್ಯಯ, ಪರಿಶೀಲನೆ, ಪ್ರಶ್ನೋತ್ತರ, ಠರಾವು ಮಂಡಿಸಲಾಗುತ್ತಿತ್ತು. ಹೆಚ್ಚಿನ ಸದಸ್ಯರು ಜನರಿಂದಲೇ ಆಯ್ಕೆಯಾಗುತ್ತಿದ್ದರು. ೧೯೦೭ ರಲ್ಲಿ 'ನ್ಯಾಯ ವಿಧಾಯಕ ಸಭೆ' ಸ್ಥಾಪಿಸಿದರು. ಇದು ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಬೆಂಗಳೂರಿನಲ್ಲಿ ಎರಡು ಬಾರಿ ಸಮಾವೇಶಗೊಂಡು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲವನ್ನು ವಿಮರ್ಶಿಸುವ, ಕಾನೂನನ್ನು ಜಾರಿಗೆ ತರುವ ಅಧಿಕಾರ ಇದ್ದಿತು. ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ, ವಾಣಿವಿಲಾಸ ಸಾಗರ, ಕೃಷ್ಣಸಾಗರ ಜಲಾಶಯಗಳನ್ನು ನಿರ್ಮಿಸಿದರು. ಉಚಿತ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾನಿಲಯ, ಉಚಿತ ಆಸ್ಪತ್ರೆ, ಮೈಸೂರು ಬ್ಯಾಂಕ್, ಸಹಕಾರ ಸಂಘಗಳನ್ನು ಸ್ಥಾಪಿಸಿದರು. ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮಾಡಿ ಮೈಸೂರು ಸಂಸಾನವನ್ನು 'ಮಾದರಿ ಮೈಸೂರು ರಾಜ್ಯ'ವನ್ನಾಗಿ ರೂಪಿಸಿ 'ಸಾಮಾಜಿಕ ಕಾನೂನುಗಳ ಹರಿಕಾರ' ಎಂಬ ಕೀರ್ತಿಗೆ ಪಾತ್ರರಾದರು.

**ಅಥವಾ**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ ಎಂದು ವಿಶ್ವೇಶ್ವರಯ್ಯನವರು ನಂಬಿದ್ದರು. ಶಿಕ್ಷಣವೇ ಸಂಜೀವಿನಿ ಎಂಬುದನ್ನು ಅರಿತು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ೧೯೧೩ ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿ, ಮೈಸೂರು ಸಂಸ್ಥಾನವೇ ಪ್ರತ್ಯೇಕವಾಗಿ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಇವರ ಕಾಲದಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯಾಯಿತು. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂಬುದನ್ನು ಅರಿತಿದ್ದ ಇವರು ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಸ್ಥಾಪಿಸಿದರು. ಏಕೀಕೃತ ಕರ್ನಾಟಕದ ರಚನೆ ಹಾಗೂ ಕನ್ನಡ ಭಾಷೆ ಸಾಹಿತ್ಯಗಳ ಮೇಲೆ ಜನರಿಗಿದ್ದ ಒಲವನ್ನು ಮನಗಂಡು 'ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ್ದು ವಿಶ್ವೇಶ್ವರಯ್ಯ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ್ದ ಕೊಡುಗೆಗೆ ಕೈಗನ್ನಡಿಯಾಗಿದೆ. | |
| 44. | ತನ್ನ ಜನ್ಮರಹಸ್ಯ ತಿಳಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?<br>***ಅಥವಾ***<br>ಶ್ರೀಕೃಷ್ಣನು ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ದುರ್ಯೋಧನ ಪಾಂಡವರನ್ನು ದ್ಯೂತದಲ್ಲಿ ಸೋಲಿಸುತ್ತಾನೆ. ಪಣದಂತೆ ೧೨ ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸ ಮುಗಿಸಿ ಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳಿದಾಗ ದುರ್ಯೋಧನ ಕೊಡಲು ನಿರಾಕರಿಸುತ್ತಾನೆ. ಸಂಧಾನದ ಮೂಲಕ ರಾಜ್ಯವನ್ನು ಮರಳಿ ಪಡೆಯಲು ಧರ್ಮರಾಯ ಕೃಷ್ಣನನ್ನು ಕಳಿಸುತ್ತಾನೆ. ಸಂಧಿ ಮುರಿದು ಬಿದ್ದು ಯುದ್ಧವೇ ಸಿದ್ಧ ಎಂದು ತೀರ್ಮಾನವಾದಾಗ, ಕೌರವರ ಸೇನೆಯಲ್ಲಿದ್ದ ಕರ್ಣನೇ ಪಾಂಡವರಿಗೆ ಪ್ರಬಲ ಎದುರಾಳಿ, ಆತನಿಂದ ಪಾಂಡವರನ್ನು ರಕ್ಷಿಸಬೇಕೆಂದು ಬಗೆದು ಕರ್ಣನಿಗೆ ಆತನ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಪಾಂಡವರ ಹಿರಿಯ ನೀನೇ. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ ಎಂಬ ಆಮಿಷ ಒಡ್ಡುತ್ತಾನೆ. ತನ್ನ ಜನ್ಮರಹಸ್ಯ ತಿಳಿದು ಕರ್ಣನು ಕುತ್ತಿಗೆಯ ನರಗಳು ಬಿಗಿದು, ಕಣ್ಣೀರು ಸುರಿಸುತ್ತಾನೆ. ಕೌರವನಿಗೆ ಕೇಡಾಗುತ್ತದೆ, ಕೃಷ್ಣನ ಹಗೆ ಹೊಗೆದೋರದೆ ಸುಡದೆ ಬಿಡುವುದಿಲ್ಲ ಎಂದು ಚಿಂತಿತನಾಗುತ್ತಾನೆ. ಕೆಲಕಾಲ ಸುಮ್ಮನಿದ್ದ ಕರ್ಣನನ್ನು ಕುರಿತು ಕೃಷ್ಣ ಹೀಗೆ ಹೇಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | 'ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಮನಸ್ಸಿಲ್ಲವೆ ? ನಾನು ನಿನಗೆ ಕೇಡು ಬಗೆಯುತ್ತಿಲ್ಲ' ಎಂದಾಗ, ಕರ್ಣನು "ಕೃಷ್ಣ ಈ ಭೂಮಿಗೆ, ರಾಜ್ಯಕ್ಕೆ ಮನಸೋಲುವವನಲ್ಲ, ಕೌರವರಿಂದ, ಪಾಂಡವರಿಂದ ಸೇವೆ ಮಾಡಿಸಿಕೊಳ್ಳಲು ಇಷ್ಟವಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ತಲೆಗಳನ್ನು ಕಡಿದು ಒಪ್ಪಿಸುವ ಅವಸರದಲ್ಲಿದ್ದೆ. ಅದಕ್ಕೂ ಮೊದಲೇ ಕೌರವನನ್ನು ಕೊಂದುಬಿಟ್ಟೆ. ಯಾರು ಏನು ಹೇಳಿದರೂ ಕೌರವನೇ ನನಗೆ ಎಲ್ಲ. ನಾಳೆ ನಡೆಯುವ ಮಹಾಭಾರತ ಯುದ್ಧದಲ್ಲಿ ದುರ್ಯೋಧನನ ಋಣ ತೀರುವಂತೆ ಹೋರಾಡುತ್ತೇನೆ. ಅವನಿಗಾಗಿ ಶರೀರವನ್ನು ಅರ್ಪಿಸುತ್ತೇನೆ. ನಿನ್ನವರಾದ ಪಾಂಡವರನ್ನು ನೋಯಿಸುವುದಿಲ್ಲ ಎನ್ನುತ್ತಾನೆ. ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಬಲಿಯಾಗದೆ ಅಸಹಾಯಕನಾಗಿ, ಸಂಕಟದಿಂದ ಬಳಲುತ್ತಾನೆ. ಕರ್ಣನ ಹಿರಿಮೆ–ಗರಿಮೆ ವ್ಯಕ್ತವಾಗಿದೆ.<br><br>**ಅಥವಾ**<br><br>ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅತ್ಯಗತ್ಯ. ಛಲ, ಮತ್ಸರ ಪ್ರಧಾನವಾದರೆ ಸಂಘರ್ಷ ಅನಿವಾರ್ಯವಾಗುತ್ತದೆ. ಶತ್ರುವಿನೊಡನೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲುವು ಸಾಧ್ಯ ಎಂಬುದು ರಾಜತಂತ್ರ. ಕೌರವರೊಂದಿಗೆ ಸಂಧಿ ಮುರಿದು ಬಿದ್ದು ಯುದ್ಧವೇ ಸಿದ್ಧ ಎಂದು ತೀರ್ಮಾನವಾದಾಗ ಕೃಷ್ಣನು ಕರ್ಣನನ್ನು ಕರೆದು ಮೈದುನತನದ ಸರಸವನ್ನು ಎಸಗಿ ತನ್ನ ರಥದಲ್ಲಿ ತೊಡೆಗೆ ತೊಡೆತಾಗುವಂತೆ ಕೂರಿಸಿಕೊಂಡು ಕರ್ಣನ ಜನ್ಮದ ರಹಸ್ಯವನ್ನು ಹೇಳುತ್ತಾನೆ. ನಿಮ್ಮಲ್ಲಿ ಯಾದವರು, ಕೌರವರು ಎಂಬ ಭೇದವಿಲ್ಲ. ಈ ಭೂಮಿಗೆ ನಿಜವಾಗಿ ನೀನೇ ಒಡೆಯನಾಗಬೇಕು. ಕುಂತಿ ಪಡೆದ ಐದು ಮಂತ್ರಗಳಲ್ಲಿ ನೀನೆ ಮೊದಲಿಗ, ಎರಡನೆಯವನು ಯುಧಿಷ್ಠಿರ, ಮೂರನೆಯವನು ಕಲಿಭೀಮ, ನಾಲ್ಕನೆಯವನು ಅರ್ಜುನ, ಕೊನೆಯ ಐದನೆಯ ಮಂತ್ರದಲ್ಲಿ ಮಾದ್ರಿಗೆ ನಕುಲ–ಸಹದೇವರು ಜನಿಸಿದರು. ನಿನ್ನನ್ನು ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ. ಕೌರವರು, ಪಾಂಡವರು ನಿನ್ನ ಸೇವಕರಾಗಿರುತ್ತಾರೆ. ಇದನ್ನು ಬಿಟ್ಟು ದುರ್ಯೋಧನನ ಎಂಜಲಿಗೆ ಕೈಚಾಚುವುದು ಸರಿಯೆ ? ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು, ನಡುವಿನಲ್ಲಿ ಮಾದ್ರರು, ಮಾಗಧರು, ಯಾದವರು ಇರುತ್ತಾರೆ. ಇವರ ನಡುವೆ ರಾಜನಾಗಿ ವಿಜೃಂಭಿಸುವುದನ್ನು ಬಿಟ್ಟು ದುರ್ಯೋಧನ ಕರೆದಾಗ ಸೇವಕನಂತೆ 'ಸ್ವಾಮಿ, ನಿಮ್ಮ ಪ್ರಸಾದ' ಎನ್ನುವುದು ಕಷ್ಟವಾಗುವುದಿಲ್ಲವೆ ? ಆದ್ದರಿಂದ ಪಾಂಡವರ ಪಕ್ಷವನ್ನು ಸೇರುವಂತೆ ಕೃಷ್ಣನು ಆಮಿಷಗಳನ್ನು ಒಡ್ಡುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 2 × 2 = 4 |

ವಿಶ್ವದ ಬಹುಭಾಷಾ ಪ್ರಪಂಚದಲ್ಲಿ ಸುಮಾರು ನಾಲ್ಕು ಸಾವಿರ ಭಾಷೆಗಳಿವೆ. ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆ ಎಂದು ವಿಂಗಡಿಸಲಾಗಿದೆ. ವ್ಯಾವಹಾರಿಕ ಎಂದರೆ ಜೀವದ ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ ಕನ್ನಡ, ತುಳು, ಕೊಂಕಣಿ, ಉರ್ದು ಇತ್ಯಾದಿ. ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಬಳಸುವ ಭಾಷೆಯೇ ಗ್ರಾಂಥಿಕ ಭಾಷೆ. ಉದಾಹರಣೆ ಸಂಸ್ಕೃತ, ಇಂಗ್ಲಿಷ್, ಹಿಂದಿ ಇತ್ಯಾದಿ ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯಾವಹಾರಿಕವಾಗಬೇಕಿಲ್ಲ ಹಾಗೆಯೇ ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕೆಂಬ ನಿಯಮವಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ. ಆದರೆ ಗ್ರಾಂಥಿಕ ಭಾಷೆಯಲ್ಲ. ದೇವಭಾಷೆ ಎನಿಸಿರುವ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದೆ ಆದರೆ, ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ. ನವಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರಹ ಬಾರದೆ ಇದ್ದರೂ ತಾನು ಕೆಲಸಕ್ಕೆ ಹೋದ ದಿನಗಳನ್ನು ದಿನನಿತ್ಯ ಗೋಡೆಯ ಮೇಲೆ ಒಂದೊಂದು ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಲೆಕ್ಕಹಾಕಿ ಸಂಬಳ ಪಡೆಯುತ್ತಾನೆ. ಇದನ್ನು ಲಿಪಿಯ ಉಗಮ ಕಾಲ ಎನ್ನುವರು.

*ಪ್ರಶ್ನೆಗಳು :*

ಅ) ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಗಳಿಗಿರುವ ವ್ಯತ್ಯಾಸಗಳೇನು ?

ಆ) ಲಿಪಿಯ ಉಗಮ ಹೇಗಾಯಿತು ?

***ಉತ್ತರ :***

ಅ) ವ್ಯಾವಹಾರಿಕ ಎಂದರೆ ಜೀವದ ಭಾಷೆ. ಇದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ. ಉದಾಹರಣೆ ಕನ್ನಡ, ತುಳು ಇತ್ಯಾದಿ. ಗ್ರಾಂಥಿಕ ಭಾಷೆ ಎಂದರೆ ಅಭಿವೃದ್ಧಿ ಹೊಂದಿ ಗ್ರಂಥರಚನೆಯಲ್ಲಿ ಬಳಸುವ ಭಾಷೆ. ಉದಾಹರಣೆ ಸಂಸ್ಕೃತ, ಹಿಂದಿ, ಇಂಗ್ಲಿಷ್ ಇತ್ಯಾದಿ. ಎಲ್ಲಾ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ಎಲ್ಲಾ ಗ್ರಾಂಥಿಕ ಭಾಷೆಗಳು ವ್ಯಾವಹಾರಿಕವಾಗಬೇಕಿಲ್ಲ. ತುಳು ಸುಂದರ ವ್ಯಾವಹಾರಿಕ ಭಾಷೆ. ಆದರೆ ಗ್ರಾಂಥಿಕವಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆ. ಯಾವ ಪ್ರದೇಶದಲ್ಲಿಯೂ ವ್ಯಾವಹಾರಿಕವಾಗಿಲ್ಲ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಆ) ನವಶಿಲಾಯುಗದ ಮಾನವ ತನ್ನ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡುಬಿಟ್ಟು ಆಸ್ತಿ ಮನೆ, ಬದುಕು ಮೊದಲಾದ ಭಾವನೆಯನ್ನು ಹೊಂದಲು ಪ್ರಾರಂಭಿಸಿದ. ಅಂದಿನಿಂದ ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. ಓದು ಬರೆಹ ಬಾರದೆ ಇದ್ದರೂ ಕೆಲಸಕ್ಕೆ ಹೋದ ದಿನಗಳ ಲೆಕ್ಕವನ್ನು ಗೋಡೆಯ ಮೇಲೆ ಗೆರೆ ಎಳೆದು ಗುರುತಿಸಿ ಕೊನೆಯಲ್ಲಿ ಎಣಿಸಿ ಲೆಕ್ಕಹಾಕಿ ಸಂಬಳ ಪಡೆಯುತ್ತಿದ್ದ. ಹೀಗೆ ಲಿಪಿಯ ಉಗಮವಾಯಿತು. | |
| | **ವಿಭಾಗ – 'ಬಿ'**<br>**(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | ಗುಣಸಂಧಿಗೆ ಉದಾಹರಣೆಯಾಗಿರುವ ಪದ<br><br>***ಉತ್ತರ :*** (ಬಿ) ಮಹರ್ಷಿ | |
| 47. | ಒಂದು ಪದವನ್ನೋ, ವಾಕ್ಯವನ್ನೋ ಹೇಳಿ, ಅದಕ್ಕೆ ಸಮನಾರ್ಥಕ ಪದವನ್ನೋ, ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ<br><br>***ಉತ್ತರ :*** (ಸಿ) ಆವರಣ | |
| 48. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ ಇದು<br><br>***ಉತ್ತರ :*** (ಡಿ) ಮಿಶ್ರ ವಾಕ್ಯ | |
| 49. | 'ಚಂದ್ರನಂತೆ' ಪದವು ವ್ಯಾಕರಣಾಂಶದ ಈ ಗುಂಪಿಗೆ ಸೇರಿದೆ<br><br>***ಉತ್ತರ :*** (ಎ) ತದ್ಧಿತಾಂತಾವ್ಯಯ | |
| 50. | 'ರಾಹುಲ' ಪದವು ನಾಮಪದದ ಈ ಗುಂಪಿಗೆ ಸೇರಿದೆ<br><br>***ಉತ್ತರ :*** (ಸಿ) ಅಂಕಿತನಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 51. | ಕೃದಂತಭಾವನಾಮಕ್ಕೆ ಉದಾಹರಣೆಯಾಗಿರುವ ಪದ | |
| | ***ಉತ್ತರ :*** (ಬಿ) ಮಾಟ | |
| 52. | ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕಾರ್ಥ | |
| | ***ಉತ್ತರ :*** (ಎ) ಸಂಪ್ರದಾನ | |
| 53. | ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆಯಾಗಿರುವ ಪದ | |
| | ***ಉತ್ತರ :*** (ಡಿ) ಸಾಕು | |
| 54. | 'ವ್ಯಾಪಾರಿ' ಪದದ ತದ್ಭವ ರೂಪ | |
| | ***ಉತ್ತರ :*** (ಸಿ) ಬೇಹಾರಿ | |
| 55. | 'ಮಾಡಳು' ಪದವು ಈ ಕ್ರಿಯಾರೂಪಕ್ಕೆ ಸೇರಿದೆ | |
| | ***ಉತ್ತರ :*** (ಡಿ) ನಿಷೇಧಾರ್ಥಕ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಇನಾಮು : ಅರಬ್ಬೀ :: ಸಲಾಮು : ......................... . | |
| | ***ಉತ್ತರ :*** ಹಿಂದೂಸ್ಥಾನಿ | |
| 57. | ಹೊಗೆದೋರು : ಕ್ರಿಯಾಸಮಾಸ :: ಚಕ್ರಪಾಣಿ : ......................... . | |
| | ***ಉತ್ತರ :*** ಬಹುವ್ರೀಹಿ ಸಮಾಸ | |
| 58. | ಕದಳಿ : ಬಾಳೆ :: ವಾಜಿ : ......................... . | |
| | ***ಉತ್ತರ :*** ಕುದುರೆ | |
| 59. | ಹಾಲ್ಜೇನು : ಜೋಡುನುಡಿ :: ಬಟ್ಟಬಯಲು : ......................... . | |
| | ***ಉತ್ತರ :*** ದ್ವಿರುಕ್ತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಕಾದದಿರೆನಜ್ಜ ಪಾಂಡವ

ರಾದರ್ ಮೇಣಿಂದಿನೊಂದೆ ಸಮರದೊಳಾಂಮೇ

***ಅಥವಾ***

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

***ಉತ್ತರ :***

| ಳ | ಳ | ಳ | |
|---|---|---|---|
| — U U | U — U | — U U | |
| ಕಾದದಿ | ರೆನಜ್ಜ | ಪಾಂಡವ | = ೧೨ |

| ಳ | ಳ | ಳ | ಳ | ಳ | |
|---|---|---|---|---|---|
| — — | — — | U — U | U U U U | — — | |
| ರಾದರ್ | ಮೇಣಿಂ | ದಿನೊಂದೆ | ಸಮರದೊ | ಳಾಂಮೇ | = ೨೦ |

ಇದು ಮಾತ್ರಾಗಣ ಛಂದಸ್ಸಿನ ಕಂದ ಪದ್ಯ ನಿಯಮದಲ್ಲಿ ರಚಿತವಾಗಿದೆ.

***ಅಥವಾ***

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U — U | — U U | U — U | U — U | U — U | — U — |
| ಒಡವೆ | ಯನರ್ಥಿ | ಗಿತ್ತೆನ | ವನೀತ | ಳಮಂ ಗು | ರುಗಿತ್ತೆ | ನೀಗಳೊಂ |

ಇದು ಅಕ್ಷರ ಗಣ ಛಂದಸಿನ ಚಂಪಕಮಾಲಾ ವೃತ್ತದ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

***ಅಥವಾ***

ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ.

***ಉತ್ತರ :***

*ಅಲಂಕಾರದ ಹೆಸರು :* ದೃಷ್ಟಾಂತಾಲಂಕಾರ

*ಲಕ್ಷಣ :* ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ–ಪ್ರತಿಬಿಂಬ ಭಾವವು ತೋರಿ ಬಂದರೆ ಅದು ದೃಷ್ಟಾಂತಾಲಂಕಾರ

*ಸಮನ್ವಯ :* ಉಪಮೇಯ : ಮಾತುಬಲ್ಲವನಿಗೆ ಜಗಳವಿಲ್ಲ (ಪ್ರತಿಬಿಂಬ)

ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ (ಬಿಂಬ)

ಇಲ್ಲಿ 'ಊಟಬಲ್ಲವನಿಗೆ ರೋಗವಿಲ್ಲ' ಎಂಬ ಉಪಮಾನ ವಾಕ್ಯಕ್ಕೂ 'ಮಾತುಬಲ್ಲವನಿಗೆ ಜಗಳವಿಲ್ಲ' ಎಂಬ ಉಪಮೇಯ ವಾಕ್ಯಕ್ಕೂ ಅರ್ಥ ಸಾದೃಶ್ಯದಿಂದ ಪರಸ್ಪರ ಬಿಂಬ ಪ್ರತಿಬಿಂಬ ಭಾವವು ಕಂಡುಬರುತ್ತಿರುವುದರಿಂದ ಈ ಮೇಲಿನ ಲಕ್ಷ್ಯವು ದೃಷ್ಟಾಂತ ಅಲಂಕಾರದ್ದಾಗಿದೆ.

***ಅಥವಾ***

*ಅಲಂಕಾರದ ಹೆಸರು :* ಉಪಮಾಲಂಕಾರ

*ಲಕ್ಷಣ :* ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

*ಸಮನ್ವಯ :* *ಉಪಮೇಯ :* ಗುಂಡು ಸುರಿಯುವುದು (ಗುಂಡು ಹಾರಿಸುವುದು)

*ಉಪಮಾನ :* ಸಿಡಿಲು ಸಿಡಿಯುವುದು

*ವಾಚಕ ಪದ :* ಹಾಂಗ (ಅಂತೆ)

*ಸಮಾನಧರ್ಮ :* (ಲುಪ್ತವಾಗಿದೆ) ತೀವ್ರತೆ

ಇಲ್ಲಿ ಉಪಮೇಯವಾದ ಗುಂಡು ಹಾರಿಸುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಹೋಲಿಸಲಾಗಿದೆ. 'ಹಾಂಗ' ಎಂಬ ವಾಚಕ ಪದವಿದ್ದು ತೀವ್ರತೆ ಲುಪ್ತವಾಗಿರುವುದರಿಂದ ಧರ್ಮಲುಪ್ತೋಪಮಾಲಂಕಾರ (ಉಪಮಾಲಂಕಾರ)ದ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | * ಕೂಡಿ ಬಾಳಿದರೆ ಸ್ವರ್ಗ ಸುಖ. | |
| | * ಮಾಡಿದ್ದುಣ್ಣೋ ಮಹಾರಾಯ. | |
| | * ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ. | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ವಿಜಯಪುರದ ವಿವೇಕಾನಂದ ಪ್ರೌಢಶಾಲೆಯ 'ಹರ್ಷಿಣಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ ಆಚರಣೆ'ಯ ವರದಿಯನ್ನು ಪ್ರಕಟಿಸುವಂತೆ ಕೋರಿ 'ಹೊಸ ದಿಗಂತ' ದಿನಪತ್ರಿಕೆಯ ಸಂಪಾದಕರಿಗೊಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ಅಶೋಕ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದ ವಿವರವನ್ನು ತಿಳಿಸಿ, ಮೈಸೂರಿನಲ್ಲಿರುವ 'ಜಯಲಕ್ಷ್ಮಿ' ಎಂಬ ಹೆಸರಿನ ತಾಯಿಯವರಿಗೊಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ತಾಯಿಯವರಿಗೆ ಪತ್ರ :* | |
| | ಇಂದ, ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | |
| | * ತ್ಯಾಜ್ಯವಸ್ತುಗಳ ನಿರ್ವಹಣೆ | |
| | * ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಸಾಮಾಜಿಕ ಜಾಲತಾಣಗಳ ಸದ್ಬಳಕೆ | |
| | * ಕರ್ನಾಟಕದ ನದಿ ನೀರಿನ ಸಮಸ್ಯೆಗಳು | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |